Regd No M/1299 SATYAVADI Four

# ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂವತ್ಸರ 31 ಸಂಚಿಕೆ 101 ] ಶುಕ್ರವಾರ 20—2—48 [ ಬಿಡಿ ಪ್ರತಿ 3 ಪೈ

## ಜುನಘಡ ಸಮಸ್ಯೆ
## ಭಾರತದ ಮೇಲೆ ಆರೋಪ

## ಕೆಲಸಾ ಕೊಡಿ !

ಭಾರತದಲ್ಲಿ ವರ್ಷಕ್ಕೆ 6000 ಪೌಂಡು ಸಂಬಳದ ಮೇಲೆ ನ್ಯಾಯಾಧೀಶರಾಗಿ ಕೆಲಸಮಾಡಿದ 40 ಜನ ಬ್ರಿಟಿಷರು ಇಲ್ಲಿಂದ ಕಾಲು ಕೀಳಬೇಕಾಯಿತು. ಈಗ ಇವರು ಇಲ್ಲಿ ತಮಗೊಂದು ಉದ್ಯೋಗ ದೊರೆತೀತೇ ಎಂದು ತವಕ ಪಡುತ್ತಿರುವರು ಇವರಲ್ಲಿ ನಾಲ್ವರು ಮುಖ್ಯಾಧೀಶರಾಗಿದ್ದರಂತೆ!

## ಬೆಕ್ಕಿಗೆ ರೇಷ್ಮೆ

ನ್ಯೂಬ್ರಿಂಲಿಂಡಿನ ದವಸ ಧಾನ್ಯಗಳ ವಖಾರಂಗಳನ್ನು ಇಲಿಗಳಿಂದ ರಕ್ಷಿಸುತ್ತ ಕೆಲಸಮಾಡಿದ ಬೆಕ್ಕುಗಳಿಗೆ ವಾರಕ್ಕೆ ಆರಾಣೆ ಮೌಲ್ಯದ ರೇಷ್ಮೆ ಕೊಡಲಾಗುವುದು. ಮನೆಗಳಲ್ಲಿರುವ ಬೆಕ್ಕುಗಳಿಗೆ ಇದು ಸಿಗುವುದಿಲ್ಲ

## ಗುಲಾಮರ ವ್ಯಾಪಾರ

'ವೋರ್ ಜಾರ್ಕ್' ಎಂಬ ಸ್ವಿಸ್ ವಾರಪತ್ರಿಕೆಯು ಆಫ್ರಿಕಾದಿಂದ ಅರೇಬಿಯಾಕ್ಕೆ ಗುಲಾಮರ ವ್ಯಾಪಾರವು ಚೆನ್ನಾಗಿ ನಡೆಯುತ್ತಿದೆಯೆಂದು ತಿಳಿಸಿದೆ ಸುಂದರಳಾದ ಪ್ರತಿ ಹುಡುಗಿಯ ಬೆಲೆ 390 ರಿಂದ 520 ರೂಪಾಯಿ : ಹುಡುಗರ ಬೆಲೆ 1040 ರೂಪಾಯಿಗಳು. ಐವರಿ ಕೋಸ್ಟ್, ಕಾಮರೂನ್ಸ್, ಗೋಲ್ಡ್ ಕೋಸ್ಟ್ ವ್ಯಾಂತ್ಯಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಜನರನ್ನು ಸಾಗಿಸುತ್ತಿದ್ದಾರಂತೆ.

**Save the Cow**
ಗೋ ವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press Chamaraja Agrahar Mysore

## ಲೇಕ್‌ಸಸೆಕ್ಸ್ ಭದ್ರತಾ ಸಮಿತಿ ಮುಂದೆ ಜುನಘಡ ಸಮಸ್ಯೆ ಚರ್ಚೆ ಪ್ರಾರಂಭವಾಯಿತು.

ಪಾಕಿಸ್ತಾನದ ಮಿ || ಜಫರುಲ್ಲಖಾನರು ಭಾರತದ ಮೇಲೆ ಆರೋಪಣೆ ಸುರಿಮಳೆ ಸುರಿಸುತ್ತಾ ಭಾಷಣ ಮಾಡಿದರು.

ಲಾಹೋರು — ಪಾಕಿಸ್ತಾನದಲ್ಲಿ ಅಪಹರಿಸಿ ತಂದ ಸ್ತ್ರೀಯರಿರುವುದು ನಮ್ಮ ದೇಶಕ್ಕೆ ಒಂದು ಕಳಂಕ ಎಂದು ಖಾ॥ ಇಫಿಟಿಕಾಲಿ ಹೇಳಿಕೆಯಿತ್ತರು ಹೇಳಿಳಿರುವರು.

ನವದೆಹಲಿ— ಕಾಫೀ ಮೇಲಿನ ಹತೋಟಿ ರದ್ದುಪಡಿಸಲಾಗಿದೆ.

ಸಿಮ್ಲಾ— ಸುಕೇತ್ ಸಂಸ್ಥಾನವನ್ನು ಇಂಡಿಯನ್ ಯೂನಿಯನ್ನಿಗೆ ಸೇರಿಸಿಬಿಡಬೇಕೆಂದು ಸತ್ಯಾಗ್ರಹ ಚಳುವಳಿ ಪ್ರಾರಂಭವಾಗಿದೆ.

ಬೆಂಗಳೂರು—ಸಂಸ್ಥಾನದಲ್ಲಿ ಹೋಮ್ ಹಾರ್ಡ್ ಸ್ಥಾಪಿಸುವ ಯೋಜನೆ ಮತ್ತು ಅದರ ವೆಚ್ಚಕ್ಕಾಗಿ ರೂ. 330720 ಮಂಜೂರಾಗಿದೆ.

ಬೆಂಗಳೂರು— ಮಾವಳ್ಳಿ ರಸ್ತೆಯ ಒಂದು ಮನೆಯನ್ನು ಪೋಲೀಸರು ಶೋಧಿಸಿ 3 ರಿವಾಲ್ವರ್‌ಗಳನ್ನು ವಶಪಡಿಸಿಕೊಂಡಿದಾರೆ.

ಲಂಡನ್ ಫೆ 18 — ಗಾಂಧೀಜಿಯವರ ಅತ್ಮಶಾಂತಿಗಾಗಿ ವೆಸ್ಟ್‌ಮಿನಿಸ್ಟರು ಆಬ್ಬೆಯಲ್ಲಿ ವಿಶೇಷ ಪ್ರಾರ್ಥನೆ ನಡೆಸಲಾಯಿತು. ಜನಸಂದಣಿ ವಿಪರೀತವಾಗಿತ್ತು. ಸರ್ ಕ್ರಿಪ್ಸರು ಗಾಂಧೀಜಿಯವರನ್ನು ಬಹಳವಾಗಿ ಪ್ರಶಂಸಿಸಿದರು.

## ಗಾಂಧೀ ಹತ್ಯೆ
### ಯಾರು ನೋಡಬೇಕೆಂಬುದಕ್ಕೆ ಲಾಟ್ರಿಯಿಂದ ನಿರ್ಧಾರ !

'ಪ್ರಜಾತಂತ್ರ' ದ ನಾಗಪುರದ ವಿಲೇಖರಿ ಗಾಂಧೀಜಿಯವರ ಹತ್ಯೆಯನ್ನು ಕುರಿತು ಈ ಕೆಳಕಂಡಂತೆ ತಿಳಿಸಿರುವರು—

25-1-46 ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖರ ಸಮಾವೇಶವು ಜರುಗಿದಾಗ್ಯೆ ತಮ್ಮಲ್ಲಿ ಯಾರು ಗಾಂಧೀಜೀ ಹತ್ಯದ ಕಾರ್ಯವನ್ನು ಕೈಗೊಳ್ಳಬೇಕೆಂಬುವ ಪ್ರಶ್ನೆಯು ಉದ್ಭವಿಸಿತಂತೆ. ಬಹಳ ಚರ್ಚೆಯಾಯಿತಂತೆ. ಪ್ರಶ್ನೆಯು ಬಗೆಹರಿಯದೇ ಹೋಗಲು ಕಡೆಗೆ ಲಾಟರಿ ಹಾಕಿ ತೀರ್ಪಿಗೆ ಬರಬೇಕೆಂದು ನಿರ್ಧರಿಸಿದರಂತೆ ಚೀಟೀ ಎತ್ತಲಾಗಿ ನಥೂರಾಂ ವಿನಾಯಕ ಘೋಡಸೆ ಹೆಸರು ಮೊದಲು ಬಂತಂತೆ.

## ಪಾಕಿಸ್ತಾನ ಕಥೆ

### ಇಬ್ಬರು ಹುಡುಗಿಯರು

(ಮುಂದುವರಿದುದು)

ಯುವಕನು ಆಗ ಏನು ಮಾಡಬೇಕೆಂದು ಬಗೆಹರಿಯದೆ ಚಿಂತಿಸುತ್ತಿರುವುದನ್ನು ಗ್ರಹಿಸಿ, ಮರಾಠಿ ಹುಡುಗಿಯು ಸ್ಪಷ್ಟವಾಗಿ 'ನೀವು ಸಂಕೋಚಪಡಲೇಕೆ? ಈ ಮಂಚದಲ್ಲೇ ಮಲಗಿರಿ' ಎಂದಳು.

'ಈ ಗುಹೆಯಲ್ಲಿ ನಿದ್ದೆ ಬರಲಿಯೆ? ಅಥವಾ ನಿಮ್ಮ ಸ್ಥಿತಿಯನ್ನು ಕಂಡ ನನಗೆ ನಿದ್ದೆ ಹೇಗೆ ಬರಬೇಕು'. ಮರುಹೇಳಲು ಹುಡುಗಿಯರು ಮಂಚವನ್ನೆತ್ತಿ ಹೊರಗೆ ಅದೆಯಲ್ಲಿ ತಂದಿಟ್ಟರು 'ಇಲ್ಲಿ ಸ್ವಲ್ಪ ಗಾಳಿಯು ಬೀಸುತ್ತಿದೆ ವಿಧ್ಯ ರಾತ್ರೆಯು ಕಳೆದರೆ ಗಾಳಿಯ ತಂಪಾಗಿರುವುದು. ತಮಗೆ ರಾತ್ರಿ ಊಟವಾಗಿದೆಯೆ?' ಎಂದು ಎರಡು ಯುವಳು ಕೇಳಿದಳು. ಅಷ್ಟರಲ್ಲಿ ಯುವಕನು 'ಹಾ! ಮರೆತೆ, ಆ ಕೈಚೀಲವನ್ನು ತನ್ನಿರಿ. ನನಗೆ ರಾತ್ರಿ ಊಟವಿಲ್ಲ' ಎಂದು ಹೇಳಿ, ಹೊರಗಿನ ಮುಂಚದಲ್ಲಿ ಹೋಗಿ ಕುಳಿತ. ಮರಾಠಿ ಹುಡುಗಿಯು ಕೈಚೀಲವನ್ನು ತಂದುಕೊಟ್ಟಳು. ಯುವಕನು ಅದರಲ್ಲಿನ ಹಣ್ಣುಗಳನ್ನು ತೆಗೆದು ಅವರಿಗೆ ಕೊಡಹೋದ. ಅವರು ತಗೊಳ್ಳಲಿಲ್ಲ. 'ನಾವಾಗಲೇ ಮಾಡಿಕೊಂಡು ಉಂಡೆವು. ನಾವೇ ನಿಮಗೆ ಕೊಡಬೇಕಿತ್ತು' ಎಂದರಾದರೂ ಯುವಕನ ಒತ್ತಾಯಕ್ಕಾಗಿ ಒಂದೊಂದು ಹಣ್ಣುಗಳನ್ನು ಹುಡುಗಿಯರು ತಗೊಂಡರು.

ಹಣ್ಣುಗಳೆಲ್ಲಾ ತಿಂದಾದ ಮೇಲೆ ಯುವಕನು ಕರವಸ್ತ್ರದಿಂದ ಕೈತೊಳೆದೊಂಡು — ನೀವಿಲ್ಲಿಗೆ ಬಂದ ಪರಿಹೇಗೆ? ಇವರ ಕೈಗೆ ನೀವೆಂತು ಸಿಕ್ಕಿದಿರಿ, ನಿಮ್ಮ ಊರಾವುದು? ಎಂದು ಪ್ರಶ್ನಿಸಿದ ಮತ್ತು ಹತ್ತಿರ ನಿಂತಿರುವವರನ್ನು ಮಂಚದಲ್ಲಿ ಕುಳಿತುಕೊಳ್ಳುವಂತೆ ಹೇಳಿದ.

ಹುಡುಗಿಯರು ಕುಳಿತುಕೊಂಡರು ಯುವಕನ ಪ್ರಶ್ನೆಗೆ ಮರಾಠಿ ಹುಡುಗಿಯು ತನ್ನ ವೃತ್ತಾಂತವನ್ನು ಹೇಳತೊಗಿದಳು —

ನಮ್ಮದು ಮಹಾರಾಷ್ಟ್ರ ಗೆ ಹತ್ತಿರ. ಆದರೆ ನನ್ನ ತಂ ಸಿಂಧ್

# ಹಡಗು ಮಾರ್ಕಿನ ಹಿಂಗಿನ ಪುಡಿ

## ಹೆಚ್ಚಿನ ಗುಣವುಳ್ಳದ್ದು



ಈ ಹಿಂಗಿನ ಪುಡಿ ನೀರನ್ನು ಸೇರಿಸದೆ ತಯಾರಿಸಿದ ಶಾಸ್ತ್ರೀಯ ಪರಿಶುದ್ಧವಾದದ್ದು. ಎಲ್ಲಾ ಸನಾತನಧರ್ಮ ಸಂಸಾರಗಳಲ್ಲೂ ಉಪಯೋಗಿಸಲರ್ಹವಾದುದು. ಅಹಾರ ಪನಾರ್ಥಗಳಿಗೆ ಒಂದು ಚಿಟಿಗೆ ಪುಡಿಯನ್ನು ಸೇರಿಸಿದ್ದೇ ಆದರೆ. ಅತಿ ಸುಮನೋಹರ ವಾಸನೆಯನ್ನು ಮತ್ತು ಶುಚಿಯನ್ನು ಕೊಡುತ್ತದೆ. ದೇಹದ ಎಲ್ಲಾ ವ್ಯಾಧಿಗಳಿಗೂ ಉಪಯುಕ್ತವಾದ ಸಂಸಾರದ ಔಷಧಿ. ಒಂದು ಸಲ ಉಪಯೋಗಿಸಿದಲ್ಲಿ ಮತ್ತೆ ಬೇರಾವುದನ್ನೂ ಉಪಯೋಗಿಸದಂತೆ ಮಾಡುವುದಲ್ಲದೇ, ಇದನ್ನೇ ಸದಾ ಉಪಯೋಗಿಸುವಂತೆ ಪ್ರೇರೇಪಿಸುವುದು ಒಂದು ಪೌಂಡು ಈ ಹಿಂಗು ನಾಲ್ಕು ಪೌಂಡ ಬಿಳೀ ಹಿಂಗಿಗೆ ಸಮಾನವಾದುದು.

ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲಿಯೂ ಒಂದು ಪೌಂಡು, ಒಂದು ಸೇರು ಅರ್ಧ ಸೇರು, ಒಂದು ಪಲಂ (ಪ್ಯಾಕೆಟ್ಟುಗಳಲ್ಲಿ) ದೊರೆಯುತ್ತದೆ ಒಂದು ಪೌಂಡಿನ ಬೆಲೆ ರೂ. 3-8-0

ನಮ್ಮ ಎ ಮತ್ತು ಟಿ. ಜಿ. ಮಾರ್ಕಿನ ಬಿಳೀ ಹಿಂಗು ಮತ್ತು ನಮ್ಮ ಶ್ರೀ ಓಂ ಮಾರ್ಕಿನ ಶುದ್ಧ ಕೇಸರಿ, ಸರ್ವ ಮಾರ್ಕಿನ ಕೇಸರಿ ಮತ್ತು ಸುವಾಸನೆ ಅಡಿಕೆ ಪುಡಿ ನಮ್ಮ ವೈಶಿಷ್ಟ್ಯ.

ವಲ್ಲಭದಾಸ್ ತೇಜ್‌ಪಾಲ್

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

# SHAKTI SUDHA

## A Superb TONIC

# ಗ್ಲೂಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಷರಬತ್ತು. ಗ್ಲೂಪ್ ಸಿರಪ್ ರುಚಿ ಸಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಷರಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

**The Mysore Industrial & Testing Laboratory Ltd.**

Malleswaram P. O. Bangalore

# SHEHNAI

STILL RUNNING AT

| | | |
|---|---|---|
| Delhi | — | 32 nd Week |
| Lucknow | | 32 nd Week |
| Cawnpur | | 28 th Week |
| Karachi | | 26 th Week |
| Bombay | | 24 th Week |

— NOW SEE AT —

# WOODLANDS

ವುಡ್‌ಲ್ಯಾಂಡ್ಸ್

20—2—48 ರಿಂದ

ಇಂದುಮತಿ, ರೆಹಾನಾ

ನಾಜಿರ್ ಖಾನ್

ಪಾತ್ರವಹಿಸಿರುವ

# ಷೆನಾಯ್

(ಅನೋಕ್ಷ ಹಿಂದೀ ಚಿತ್ರ)

ಪ್ರತಿ ದಿನ 3 ಆಟಗಳು

—An Evershine Release —

## Woodlands

Morning Shows at 10-30

or 4 Days From 20—2—48

— ಬೆಳಗಿನ ಪ್ರದರ್ಶನ —

ಮಾಸ್ಟರ್ ಕಿಶೋರಿ — ಮೆಹರುನ್ನೀಸ

ಪಾತ್ರವಹಿಸಿರುವ

# ಭೇಡಿದುಶನ್

ಕ್ರ

## At Opera

## From 20—2—48

# BIG NOISE

— with —

LAURAL & HARDY

Daily 3 Shows

Morning Shows from 20-2-48

**One More Tomorrow**


ಉದ್ಯೋಗದಲ್ಲಿದ್ದರು. ಕೆಲವು ತಿಂಗಳ ಆಚೆ ಹತ್ತಿರದ ಸಂಬಂಧಿಗಳೊಬ್ಬರ ಮನೆಗೆ ನಾನೂ ನನ್ನ ತಮ್ಮನೂ ರೈಲು ಗಾಡಿಯಲ್ಲಿ ಪ್ರಯಾಣ ಬೆಳಸಿದ್ದೆವು. ಅಯ್ಯೋ! ನಾವಾವ ಗಳಿಗೆಯಲ್ಲಿ ಹೊಂಟೆವೋ! ನಮ್ಮ ಗಾಡಿಯಲ್ಲಿ ಹೆಚ್ಚು ಮಂದಿಯೇ ಇರಲಿಲ್ಲ. ನಾವಿಬ್ಬರಲ್ಲದೆ ಬೇರೆ ಮೂರು ಮಂದಿ ಮುಸಲ್ಮಾನರು ಮಾತ್ರವಿದ್ದರು. ರಾತ್ರಿ ವೇಳೆ. ಆ ಮೂರು ಮಂದಿಯೂ ಕೊಲೆಗಡುಕರೆಂದು ಯಾರು ಬಲ್ಲರು. ಗಾಡಿಯು ರಭಸದಿಂದ ಚಲಿಸುತ್ತಿತ್ತು. ಅವರು ಎದ್ದು ಬಂದು ನಮ್ಮನ್ನಾಕ್ರಮಿಸಿದರು, ನನ್ನ ತಮ್ಮನನ್ನು ಇರಿದು ಹೊರಗೆ ಒಗೆದುಬಿಟ್ಟರು. ಗಾಡಿಯು ನಿಂತಲ್ಲಿ ನನ್ನನ್ನು ಅಮುಕಿ ತಂದು ಒಂದು ಕಾರಿನಲ್ಲಿ ಹಾಕಿ ಕರಾಚಿಗೆ ತಂದರು. ಅಲ್ಲೊಂದು ಅಜ್ಞಾತ ಸ್ಥಳದಲ್ಲಿ ನನ್ನಂತೆ ತರಲ್ಪಟ್ಟಿದ್ದ ಇನ್ನೆಷ್ಟೋ ಅಭಾಗಿನಿಯರ ಜೊತೆಗೆ ನನ್ನನ್ನು ಸೇರಿಸಿದರು, ಅಲ್ಲೇ ಈ ಮಾಲಿನಿಯೂ ತಂದಿರಲ್ಪಟ್ಟಿದ್ದಳು ಎಂಟು ದಿನಗೆಗು ನಾವಲ್ಲಿದ್ದೆವು. ನಮ್ಮನ್ನು ಎಲ್ಲಿಗೋ ಹಡಗಿನಲ್ಲಿ ಸಾಗಿಸುವರೆಂದು ಹೇಳುತ್ತಿದ್ದರು. ಆದರೆ ಒಂದು ದಿನ ರೈಲ್ವೆಯನ್ನೇ ಹತ್ತಿಸಿದರು ನಾವು ಕರಾಚಿಯಿಂದ ಹೊರಡುವಾಗ 50 ಮಂದಿ ಇದ್ದೆವು. ಆದರೆ ಅಲ್ಲಲ್ಲಿ ಕೆಲವರನ್ನು ಅಗಲಿಸಿ ಬೇರೆ ಕಡೆಗೆ ಒಯ್ಯುತ್ತಿದ್ದರು ನಮ್ಮಿಬ್ಬರನ್ನು ಇಲ್ಲಗೆ ತಂದಿಟ್ಟಿರುವರು ಅವರೆಲ್ಲಾ ಎಲ್ಲಿ ಯಾವ ಸ್ಥಿತಿಯಲ್ಲಿರುವರೋ ಇಲ್ಲವೋ ನಮಗೆ ತಿಳಿಯದು ಈಗ ಒಂದೂವರೆ ತಿಂಗಳಿಂದ ನಾವಿಲ್ಲಿ ಕೊಳೆಯುತ್ತಿರುವೆವು ಎಂದು ಹೇಳಿ ಸುಮ್ಮನಾದಳು

ಎರಡನೆಯ ಹುಡುಗಿಯು ಹೇಳತೊಡಗಿದಳು — ನಮ್ಮದು ಕಲಿಕತ್ತೆ, ನಾನು ಇಂಟರ್ ಕ್ಲಾಸಿನಲ್ಲಿ ಓದುತ್ತಿದ್ದೆನು ಒಂದು ದಿನ ಸಂಜೆ ಮನೆಗೆ ಬರುವಾಗ ಕತ್ತಲೆಯಾಗಿತ್ತು ಒಂದು ಪಾರ್ಕಿನ ಹತ್ತಿರ ನಡೆಯುತ್ತಿದ್ದಾಗ ಎರಡು ಮೂರು ಜನ ಬಂದು ನನ್ನನ್ನು ಹಿಡಿದರು. ಬಾಯಿಗೆ ಅರಿವೆಯನ್ನು ತುರುಕಿಸಿ ಒಂದು ಮೋಟಾರ್ ಕಾರಿನಲ್ಲಿ ಹಾಕಿ ಆ ರಾತ್ರೆ ಅಲ್ಲೇ ಎಲ್ಲೋ ಒಂದು ಮನೆಯಲ್ಲಿಟ್ಟರು ಮರುದಿನ ರಾತ್ರಿ ಕಾರಿನಲ್ಲಿ ನಾಗಪುರಕ್ಕೆ ತಂದರು ಎರಡು ಮೂರು ದಿನಗಳಲ್ಲಿ ಅಲ್ಲಿಂದ ಕರಾಚಿಗೆ ತಂದು ಸೇರಿಸಿದರು ಮುಂದಿನದು ಏನಾನಾ ಹೇಳಿರುವಷ್ಟೆ ಎಂದು ಹೇಳಿದಳು [ಮಂಗಳವಾರದ ಸಂಚಿಕೆಯಲ್ಲಿ ಮುಂದಕ್ಕೆ